Amruthur-Yadavanne Road

331. Sri N. HUTCHMASTHY GOWDA (Kunigal).—

Will the Minister for Public Works be pleased to state :—

(*a*) the places on Amruthur-Yadavanne road where the execution of work has stopped ;

(*b*) when the said work was stopped ;

(*c*) whether acquisition proceeding is in progress ;

(*d*) the stage at which the acquisition proceeding stands at present ?

Sri BASAVARAJ MAGAVI (Deputy Minister for Public Works).—

(*a*) At miles 8/6, 1 and 2/7, 2 and 3/5, 6/2.
(*b*) In 1963-64.
(*c*) Yes.
(*d*) Firancial Notification has been issued.

ಶ್ರೀ ಎನ್. ಹುಚ್ಚಮಾಸ್ತಿಗೌಡ.—1963-64ರಿಂದ ಈ ರಸ್ತೆಗೆ ಬೇಕಾಗಿರುವ ಜಮೀನು ತಮ್ಮ ಸ್ವೇಚ್ಛೆಯಿಂದ ಬೇಕಾಗಿದ್ದುದು ಎಂದು ಅಕ್ವೈರ್ ಮಾಡಿಕೊಳ್ಳದೆ ಕೈಬಿಟ್ಟಿದ್ದಿರೋ ಅಥವಾ ಈ ರಸ್ತೆಯ ಅವಶ್ಯಕತೆ ಇಲ್ಲವೆಂದು ಕೈಬಿಟ್ಟಿದ್ದಿರೋ, ಅವಶ್ಯಕತೆ ಇದ್ದರೆ ಎಷ್ಟು ಬೇಗ ಜಮೀನನ್ನು ಅಕ್ವೈರ್ ಮಾಡಿಕೊಂಡು ರಸ್ತೆಯನ್ನು ಮಾಡಿಸುತ್ತೀರಾ ಎಂಬುದನ್ನು ಹೇಳಬೇಕು ?

† ಶ್ರೀ ಬನವರಾಜ ಮಾಗಾವಿ.—ಇದರಲ್ಲಿ ಮುಖ್ಯವಾಗಿರುವ ತೊಂದರೆ ಎಂದರೆ, ಅಂಚಿಪುರ ಗ್ರಾಮದವರು ರೆಕಗ್‌ನೈಸ್ಡ್ ಪಾತ್ ಬಿಟ್ಟು ಮಾಮೂಲಿ ರಸ್ತೆಯನ್ನೇ ಇಂಪ್ರೂವ್ ಮಾಡಿಕೊಂಡು ಬಂದರು. ಈ ಕಾರಣದಿಂದ ಗರಾಜಿಯಾಗಿ ರೆವಿನ್ಯೂ ಅಪರೇಟ್ ಟ್ರಿಬ್ಯುನಲ್‌ಗೆ ತೀರ್ಮಾನಕ್ಕಾಗಿ ಹೋಯಿತು. ಅವರು ತೀರ್ಮಾನ ಕೊಟ್ಟಿದ್ದಾರೆ. ಅವರ ತೀರ್ಮಾನದ ಪ್ರಕಾರ ಭೂಸ್ವಾಧೀನದ ಕಾರ್ಯ ಪ್ರಾರಂಭವಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೆವಿನ್ಯೂ ಅಪರೇಟ್ ಟ್ರಿಬ್ಯುನಲ್ ಅವರು ತೀರ್ಮಾನ ಕೊಟ್ಟು 3 ವರ್ಷವಾಯಿತು. ಈ ರಸ್ತೆಯನ್ನು ಆದಷ್ಟು ಬೇಗ ಮಾಡಿಸಲು ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಬನವರಾಜ ಮಗಾವಿ.—ಭೂಸ್ವಾಧೀನ ಮಾಡಿಕೊಳ್ಳುವ ಕೆಲಸ ಸ್ವಲ್ಪ ತೊಂದರೆಯಾಗಿದೆ. ಆದರೂ ಈ ರಸ್ತೆಯನ್ನು ತ್ವರಿತಗತಿಯಿಂದ ಮಾಡಿಸಲು ಫೈನಲ್ ನೋಟಿಫಿಕೇಷನ್ ಹೊರಡಿಸಿದ್ದೇವೆ.

Water Supply Scheme

361. Sri M. NAGAPPA (Raichur).—

Will the Minister of State for Municipal Administration be pleased to state :—

(*a*) whether any comprehensive water supply scheme for Raichur Town is pending before the Government ;

(*b*) if so, the stage at which this scheme stands at present ;

(*c*) when the scheme will be completed ?

Sri B. M. PATIL(Minister of State for Municipal Administration). —

(*a*) Yes.

(*b*) The scheme is under examination.

(*c*) As early as possible.

ಶ್ರೀ ಎಂ. ನಾಗಪ್ಪ.—ಈ ಯೋಜನೆಯು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಈಗ ಯಾವ ಹಂತದಲ್ಲಿ ಇದೆ ಎಂದು ಹೇಳುತ್ತೀರಾ ?

† ಶ್ರೀ ಬಿ. ಎಂ. ಪಾಟೀಲ್.—ಈಗ ಕೊನೆಯ ಹಂತದಲ್ಲಿ ಇದೆ. ಎಸ್ಟಿಮೇಟ್ ತಯಾರಾಗಿದೆ. ಸರ್ಕಾರದ ಮಂಜೂರಾತಿಯಾದ ಮೇಲೆ ಎಲ್. ಐ. ಸಿ. ಯಿಂದ ಸಾಲ ತೆಗೆದುಕೊಳ್ಳುವ ಬಗ್ಗೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಎಂ. ನಾಗಪ್ಪ.—ಈ ಯೋಜನೆಯ ಅಂದಾಜು ವೆಚ್ಚ ಎಷ್ಟು ?

ಶ್ರೀ ಬಿ. ಎಂ. ಪಾಟೀಲ್.—ಇದರಲ್ಲಿ ಎರಡು ಸ್ಕೀಮ್‌ಗಳು ಇವೆ. ಮೊದಲನೆ ಸ್ಕೀಮ್‌ಗೆ 67.5 ಲಕ್ಷ ರೂಪಾಯಿಗಳು ಖರ್ಚು ಆಗುತ್ತದೆ. ಎರಡನೆಯ ಸ್ಕೀಮ್‌ಗೆ 7.99 ಲಕ್ಷ ರೂಪಾಯಿಗಳು ಖರ್ಚು ಆಗುತ್ತದೆ.

ಶ್ರೀ ಎಂ. ನಾಗಪ್ಪ.—ಈ ಯೋಜನೆಗೆ ಅಡ್ಮಿನಿಸ್ಟ್ರೇಟಿವ್ ಸಾಂಕ್ಷನ್ ಆಗುವುದಕ್ಕೆ ಇಷ್ಟು ನಿಧಾನ ವಾಗಲು ಕಾರಣವೇನು ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಹೇಳುವಂತೆ ಬಹಳ ದಿವಸಗಳಾಗಿಲ್ಲ. 1968ರಲ್ಲಿ ಮೊದಲನೆಯ ಎಸ್ಟಿಮೇಟ್ 60 ಲಕ್ಷ ರೂಪಾಯಿಗಳಿಗೆ ತಯಾರಾಗಿತ್ತು. ಈಗ ಡೀಟೈಲ್ಡ್ ಪ್ಲಾನ್ ಅಂಡ್ ಎಸ್ಟಿಮೇಟ್ ತಯಾರು ಮಾಡಲಾಗಿದೆ. ಈ ಬಗ್ಗೆ ಅಲ್ಲಯ ಮುನಿಸಿ ಪಾಲಿಟಿಯವರು ತಮ್ಮ ಭಾಗವನ್ನು ಕೊಡುವ ಬಗ್ಗೆ ಒಂದು ಠರಾವನ್ನು ಮಾಡಿ ಕಳಿಸಬೇಕೆಂದು ಬರೆದಿದ್ದೇವೆ. ಅದರಂತೆ ಅವರು ಡಿಸೆಂಬರ್ 1968ರಲ್ಲಿ ಮಾಡಿ ಕಳಿಸಿದ್ದಾರೆ. ಈಗ ಕೊನೆಯ ಹಂತಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ.

Sri D. B. KALMANKAR.—What is the source of water supply ?

Sri B. M. PATIL.—The source in Krishna river.

Sri M. NAGAPPA.—It is not Krishna river but is Tunga Bhadra Left Bank Canal.

Sri B. M. PATIL.—I shall verify it.

ಶ್ರೀ ಸದಾಶಿವಪ್ಪ ಪಾಟೀಲ್.—ಕುಡಿಯುವ ನೀರಿನ ಯೋಜನೆಯು ಪ್ರಶ್ನೆ ಬಂದಾಗಲೆಲ್ಲಾ ಸರ್ಕಾರದವರು ಪರಿಶೀಲನೆಯಲ್ಲಿ ಇದೆ ಎಂದು ಉತ್ತರ ಕೊಡುತ್ತಿರುತ್ತಾರೆ. ಅದನ್ನು ಬಿಟ್ಟು ಜಾಗ್ರತೆ ಮಾಡುತ್ತೇವೆ ಎಂಬ ಉತ್ತರವನ್ನು ಇನ್ನು ಮುಂದೆ ಕೊಡುತ್ತಾರೆಯೇ !

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಹೇಳಿದ್ದೇನೆ. ತ್ವರಿತವಾಗಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ.

ಶ್ರೀ ಎಂ. ನಾಗಪ್ಪ.—ಎಲ್. ಐ. ಸಿ. ಯಿಂದ ಲೋನ್ ತೆಗೆದುಕೊಂಡರೆ ಇಂಟರೆಸ್ಟ್ ಯಾವರೀತಿ ಹಾಕುತ್ತಾರೆ. ಆ ಇಂಟರೆಸ್ಟ್‌ನ್ನು ಕೊಡುವ ಶಕ್ತಿ ಮುನಿಸಿಪಾಲಿಟಿಯವರಿಗೆ ಸಾಧ್ಯವೇ ಎಂಬುದನ್ನು ಸರ್ಕಾರದವರು ಪರಿಶೀಲಿಸಿ, ಸರ್ಕಾರದವರೇ ಲೋನ್ ಕೊಡುವುದಕ್ಕೆ ಯೋಚನೆ ಮಾಡುತ್ತಾರೆಯೇ !

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಕಂಟ್ರೋಲರ್ ಆಫ್ ಸ್ಟೇಟ್ ಅಕೌಂಟ್ಸ್ ಅವರು ಮುನಿಸಿಪಾಲಿಟಿಯ ಆದಾಯ ಚೆನ್ನಾಗಿದೆ ಎಂದು ಹೇಳಿದ್ದಾರೆ. ಎಲ್. ಐ. ಸಿ. ಅವರಿಂದ ತೆಗೆದುಕೊಂಡ ಸಾಲವನ್ನು 20 ಕುಂತುಗಳಲ್ಲಿ ಕೊಡಬೇಕಾಗುತ್ತದೆ. ಮತ್ತು 6. 34 ಪರ್‌ಸೆಂಟ್ ಇಂಟರೆಸ್ಟ್ ಚಾರ್ಜು ಮಾಡುತ್ತಾರೆ.